ಚಿಕ್ಕೋಬನಹಳ್ಳಿ, ಚಾಂದ್‌ಬಾಷ, ಚಿತ್ರದುರ್ಗ
*ಟಿಕೆಟ್‌ಗಾಗಿ ಪಕ್ಷಾಂತರ ಮಾಡುವಾಗ ಮೌಲ್ಯ, ಸಿದ್ಧಾಂತಗಳೆಲ್ಲ ಎಲ್ಲಿ ಹೋಗುತ್ತವೆ?*



ಮೌಲ್ಯ ಇವರ ತಿಜೋರಿಗೆ, ಸಿದ್ಧಾಂತ ಹೊರಕ್ಕೆ!

ಕೆ. ಶ್ರೀನಿವಾಸನ್, ಹರಪನಹಳ್ಳಿ
*ನಾರಿ ಮುನಿದರೆ ಮಾರಿ ಅಂತಾರೆ. ಈಗ ಮುನಿದಿದ್ದಾಳೆ. ಎಷ್ಟಕ್ಕೆ ಮಾರಲಿ?*
ಹುಷ್! ಮೆಲ್ಲಗೆ! ಯಾರಾದರೂ ಕೇಳಿಸಿಕೊಂಡರೆ ಅವಳ ಮಾರಾಟದ ಮಾತಿರಲಿ, ನಿಮ್ಮನ್ನು ಕೋರ್ಟ್‌ನಲ್ಲಿ ಹರಾಜ್ ಹಾಕ್ತಾರೆ!

ಪಿ.ಎನ್. ಶ್ರೀವತ್ಸ, ಬೆಂಗಳೂರು
*ನಿಮ್ಮ ನಂತರ ಉತ್ತರಿಸುವವರಾರು ಎಂದು ನನಗೇ ಇಷ್ಟೊಂದು ಚಿಂತೆಯಾಗಿಬಿಟ್ಟಿದೆಯಲ್ಲಾ...?*
ನನಗೂ ನಿಮ್ಮ ನಂತರ ಪ್ರಶ್ನಿಸುವವರಾರು ಎಂದು ಚಿಂತೆಯಾಗಿದೆ; ಮಕ್ಕಳು, ಮೊಮ್ಮಕ್ಕಳಿಗೆ ಬೇಗ ಟ್ರೈನಿಂಗ್ ಕೊಟ್ಟುಬಿಡಿ.

ಎಸ್. ಲಕ್ಷ್ಮೀನರಸಿಂಹ, ಚಾಮರಾಜನಗರ
*ಯಾವ ವಾಹನದಲ್ಲಿ ಹೋದರೆ ಈಗ ಅಪಘಾತವಾಗುವ ಸಂಭವ ಕಡಿಮೆ?*




ಶವವಾಹನದಲ್ಲಿ! ಅದು ಅಪಘಾತವಾದ ಸುದ್ದಿ ಅತಿ ವಿರಳ!

ಮಲ್ಲಿಕಾರ್ಜುನ ಗಚ್ಚಿ, ಗೋಗಿ
*ಪ್ರಜಾಪ್ರಭುತ್ವದ ಬೆಲೆಯರಿಯದ ನಮಗೆ ಆಮಿಷ ಒಡ್ಡುವ ಜನಪ್ರತಿನಿಧಿಗಳ ದರ್ಬಾರಿನ ಚುನಾವಣೆ ಬೇಕೆ?*
ಕ್ಷಮಿಸಿ. ಇದು ದರ್ಬಾರಿನ ಚುನಾವಣೆಯಲ್ಲ, ಬಾರಿನ ಚುನಾವಣೆ! ಹೆಂಡಕ್ಕೆ ಮತ, ದ್ವೇಷಕ್ಕೆ ಹಿತ!

ಮಹೇಶ್ ಸಣ್ಣಗಿರಿ, ಕೊಟ್ಟೂರು
*ದ್ರೌಪದಿಗೂ, ಸೀತೆಗೂ, ಆಧುನಿಕ ಸ್ತ್ರೀಗೂ ಏನು ವ್ಯತ್ಯಾಸವಿದೆ ರಾಮ್?*
ಸೀತೆ 1 ವರ್ಷ, ದ್ರೌಪದಿ 15 ವರ್ಷ ಜಡೆ ಬಾಚಿಕೊಳ್ಳಲಿಲ್ಲ!

ಅಭಿಷೇಕ್ ಆರ್. ಬೊಂಗಾಳೆ, ಬೈಲಹೊಂಗಲ
*ತಂದೆಯ ದುಡ್ಡಿನಲ್ಲಿ ತಿಂದು ಮೋಜು ಮಾಡುವವರಿಗೆ ಏನೆನ್ನುತ್ತಾರೆ?*
ಇವರಿಗೂ ಏನಾದರೂ ಸಿಗಲೆಂಬ ಆಸೆಯಿಂದ 'ಹಲೋ ಫ್ರೆಂಡ್' ಅನ್ನುತ್ತಾರೆ!

ಮೋಹನ್‌ರಾಜು ಎಸ್.ಎ. ಶಿವಮೊಗ್ಗ
*ಕೃಷಿಋಷಿಗೂ, ರಸಋಷಿಗೂ ಇರುವ ಹೋಲಿಕೆ ಮತ್ತು ವ್ಯತ್ಯಾಸ ತಿಳಿಸುವಿರಾ...?*
ಇಬ್ಬರೂ ಋಷಿ ಹರಡುವವರೇ; ಕೃಷಿಋಷಿ ಧಾನ್ಯಕ್ಕೆ ಮಹತ್ವ ನೀಡುತ್ತಾನೆ, ರಸಋಷಿ ಧ್ಯಾನಕ್ಕೆ!

ಎಚ್.ಆರ್. ದೇಸಾಯಿ, ರಾಯಚೂರು
*ಪ್ರೇಮ ಪಕ್ವವಾಗಬೇಕಾದರೆ ಮನಸ್ಸುಗಳು ಬೆಸೆಯಬೇಕೋ, ಅಧರಗಳು ಬೆಸೆಯಬೇಕೋ, ಶರೀರಗಳು ಬೆಸೆಯಬೇಕೋ?*
ಅಧರ, ಶರೀರಗಳು ಬೆಸೆಯಲು ಪಶುತ್ವವೇ ಸಾಕು; ಮಾನವನ ಪ್ರೇಮಕ್ಕೆ ಮನವೇ ಮುಖ್ಯ.

ಶೈಲಜಾ ಕೇಕಣಾಜೆ, ಮಂಗಳೂರು
*ಆಸೆ ದುಃಖಕ್ಕೆ ಮೂಲವಂತೆ. ಆಸೆಗೆ ಮೂಲ?*
ಅತೃಪ್ತಿ!

ಬಿ. ಚಂದ್ರೇಗೌಡ, ಬೆಂಗಳೂರು
*ಭೂಮಿತೂಕದ ಹೆಣ್ಣು ಹೇಗಿರುತ್ತಾಳೆ?*
ಹೆಚ್ಚುಕಡಿಮೆ ಕುಮಾರಿ ಜೈಲಲಿತಾರಂತೆ!

ಗಣೇಶ ಎಂ. ಪೈ, ಬೆಂಗಳೂರು
*ಕನ್ನಡ ಸಾಹಿತಿಗಳಿಗೆ ಪ್ರತಿಷ್ಠಿತ ಪ್ರಶಸ್ತಿಗಳು ಲಭಿಸಿದಾಗ ಇತರ ಸಾಹಿತಿಗಳು ಹೆಮ್ಮೆ ಪಡದೆ ಕ್ಯಾತೆ ತೆಗೆಯುವುದೇಕೆ?*
ತಮಗೆ ಸಿಕ್ಕಿಲ್ಲ ಎಂದಿರಬಹುದೇ?

ಮಂಜುನಾಥ ಎಸ್. ಗುಂಜೂರು
*ಹೇಗಿದ್ದರೂ ಸಾಯುವ ಗಲ್ಲು ಶಿಕ್ಷೆಗೆ ಗುರಿಯಾಗಿರುವ ಖೈದಿಗೆ ಚಿಕಿತ್ಸೆ ಏಕೆ ಕೊಡಿಸಬೇಕು?*
ಕೊಡಿಸದೆ ಹಾಗೇ ಸತ್ತುಹೋದರೆ ಗಲ್ಲು ಶಿಕ್ಷೆಯ ಆರ್ಡರ್ ವೇಸ್ಟ್ ಆಗಿಬಿಡುತ್ತದಲ್ಲ!

## ಬಹುಮಾನಿತ ಪ್ರಶ್ನೆ

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಮನುಷ್ಯನಂತೆ ಪ್ರಾಣಿಗಳಿಗೂ ನಾಚಿಕೆಯಾಗುವಂತಿದ್ದಿದ್ದರೆ...?*
ಮನುಷ್ಯರಿಗಿಂತ ಹೆಚ್ಚು ಮರ್ಯಾದೆಯಾಗಿ ಜೀವಿಸುತ್ತಿದ್ದವು.

ಮೊಳಕಾಲ್ಮೂರು ಸುರೇಶ, ಬಳ್ಳಾರಿ
*ಇಂದಿನ ನಿತ್ಯಭವಿಷ್ಯದಲ್ಲಿ ಮಡದಿಯಿಂದ ಪ್ರಶಂಸೆ ಅಂತ ಇದೆಯಲ್ಲಾ...?*
ಯಾರ ಮಡದಿಯಿಂದ?

ಕೆ.ಎಂ. ಲಿಂಗರಾಜು, ನಂಜನಗೂಡು
*ಚಟಕ್ಕೂ, ಹವ್ಯಾಸಕ್ಕೂ ನಡುವೆ ಇರುವ ವ್ಯತ್ಯಾಸವೇನು?*
ಅಂಟಿಕೊಂಡದ್ದು ಚಟ, ಬೆಳೆಸಿಕೊಂಡದ್ದು ಹವ್ಯಾಸ.

ಆರ್. ಮಧುಸೂದನ್, ಹಾಸನ
*ಕಪ್ಪುಹಣದಿಂದ ಕಟ್ಟಿದ ಮನೆಗೆ ಏನೆಂದು ಹೆಸರಿಡಬಹುದು?*




ಅಕ್ರಮ ವಿಲ್ಲಾ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಒಂದೊಮ್ಮೆ ಮನುಷ್ಯನಿಗೆ ತನ್ನ ರೂಪವನ್ನು ಬದಲಾಯಿಸಿಕೊಳ್ಳುವಂತಹ ಶಕ್ತಿ ಇದ್ದಿದ್ದರೆ?*
ಛೆ! ಇಂದ್ರ-ಅಹಲ್ಯೆಯಂತಹ ಪ್ರಸಂಗಗಳು ಪ್ರತಿದಿನ ನಡೆದುಬಿಡುತ್ತಿದ್ದವು!

ನಾಗ, ಬೆಂಗಳೂರು
*ಕಣ್ಣೀರು ಜೆಡಿಎಸ್ ಅನುಯಾಯಿಗಳಿಗೆ ಪಕ್ಷಪ್ರಮುಖರು ಕೊಟ್ಟ ಬಳುವಳಿಯೆ?*
ಅದು ಕೊಟ್ಟ ಬಳುವಳಿಯಲ್ಲ, ವಂಶಕ್ಕೆ ಮಾತ್ರ ಸೀಮಿತವಾದ ಹೆರಿಡಿಟರಿ ಕ್ಯಾರೆಕ್ಟರ್!

ಬಸವನಗೌಡ ಹೆಚ್.ಸಿ. ಶಿವಮೊಗ್ಗ
*ಕುಡಿಯೋದು ಎಂದರೆ ಎಲ್ಲರೂ ಹೆಂಡ ಅಂತಾನೇ ಯಾಕೆ ತಿಳ್ಕೋತಾರೆ ಸಾರ್?*
ಪುರಾಣಪ್ರಭಾವ! ಅವುಗಳಲ್ಲಿ ಪಾನ ಎಂದರೆ ಸುರಾಪಾನವೇ ವಿನಹ ಎಲ್ಲೂ ಜಲಪಾನದ ಉಲ್ಲೇಖವೇ ಇಲ್ಲವಲ್ಲ!

■ ರಾಮ್